ಮೂಲ ದಾವಾ ನಂಃ 40/2018

ಡಿ .ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **29.11.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ ಎ.ಎಸ್.ಎಸ್ (ಬಿ) ವಾದಿ ಪರ ವಕೀಲರಿಂದಃ**

ನಾನು ಯಾರ ಪರವಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದು ನನಗೆ ತಿಳಿದಿದೆ. ನನ್ನ ತಾಯಿ ಮತ್ತು ಸಹೋದರರ ಜಿ.ಪಿ.ಎ ಹೋಲ್ಡರ್ ಆಗಿ ನಾನು ಸಾಕ್ಷಿ ನುಡಿಯಲು ಬಂದಿದ್ದು, ಅವರು ತಮ್ಮ ಪ್ರತಿವಾದ ಪತ್ರದಲ್ಲಿ ಏನೆಲ್ಲ ಬರೆದು ಹಾಕಿದ್ದಾರೆಂದು ನನಗೆ ತಿಳಿದಿದೆ. ಅದೇ ರೀತಿ ವಾದಿಯರು ಯಾವ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ವಾದಿಯರು ಯಾವ ಯಾವ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು 7 ಮತ್ತು 8 ನೇ ಪ್ರತಿವಾದಿಯರ ಪರವಾಗಿ ಯಾವ ಯಾವ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆಂದು ನನಗೆ ತಿಳಿದಿರುತ್ತದೆ ಎಂದರೆ ಸರಿ. ವಾದಿಯರು ಯಾವ ಕಾರಣಕ್ಕಾಗಿ ಈ ದಾವೆಯನ್ನು ಮಾಡಿರುತ್ತಾರೆ ಎಂದರೆ, ಸಾಕ್ಷಿಯು ವಾದಿಯರು ತಮ್ಮ ಅಜ್ಜನ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ಹೇಳಿ ಈ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ದಾವಾಸ್ತಿಗಳಲ್ಲಿ ತಮ್ಮ ಪಾಲನ್ನು ಕೇಳಿ ಈ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಮೂಲದಲ್ಲಿ ದಾವಾಸ್ತಿ ಶ್ರೀ ಮಾಲು ಬಾಬು ದನಗರಗೌಳಿ @ ವರಕ ರವರಿಗೆ ಸರ್ಕಾರದಿಂದ ಮಂಜೂರಿಯಾದ ಆಸ್ತಿ. ನಾನು ಮೂಲ ಪುರುಷ ಸದರಿ ಶ್ರೀ ಮಾಲುರವರನ್ನು ನೋಡಿರುವುದಿಲ್ಲ. ನಾನು ಸಣ್ಣವನಿದ್ದೆ. ಸದರಿ ಮೂಲ ಪುರುಷನಿಗೆ ಒಬ್ಬಳೆ ಹೆಂಡತಿ ಇದ್ದು 3 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳಿದ್ದಳು. ಸದರಿ ಹೆಣ್ಣು ಮಗಳ ಹೆಸರು ಶ್ರೀಮತಿ ಸಕ್ಕುಬಾಯಿ. ಸದರಿ ಸಕ್ಕುಬಾಯಿ ಈಗ ಇಲ್ಲ. ಸದರಿ ಸಕ್ಕುಬಾಯಿರವರು ಮೂಲ ಪುರುಷನ ಮರಣದ ಸುಮಾರು ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ಸದರಿ ಸಕ್ಕುಬಾಯಿ ರವರಿಗೆ ಮದುಯಾಗಿತ್ತು, ಅವರಿಗೆ ಮಕ್ಕಳಿದ್ದಾರೆ. ಅವರ ಮಕ್ಕಳನ್ನು ನಾನು ನೋಡಿದ್ದೇನೆಯೇ ಎಂದರೆ, ಸಾಕ್ಷಿಯು ಅವರು ಯರೇಬೈಲ್ ಗ್ರಾಮದಲ್ಲಿರಬಹುದು, ಸುಮಾರು ವರ್ಷಗಳಾಯಿತು, ನಾನು ಅವರಿಗೆ ಭೇಟಿ ಆಗಿಲ್ಲ. ಸದರಿ ಸಕ್ಕುಬಾಯಿರವರು ಮೂಲ ಪುರುಷನ ಮಗಳ ಸ್ವಂತ ಮಗಳೋ ಅಥವಾ ಸಾಕು ಮಗಳೋ ಎಂದರೆ, ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಮೂಲ ಪುರುಷನಿಗೆ 3 ಜನ ಗಂಡು ಮಕ್ಕಳು ಮಾತ್ರ ಇದಿದ್ದು, ಅವರಿಗೆ ಹೆಣ್ಣು ಸಂತಾನ್ ಇಲ್ಲದೇ ಇದ್ದ ಕಾರಣ, ಅವರು ಸಕ್ಕುಬಾಯಿರವರನ್ನು ಸಾಕುಕೊಂಡಿದ್ದರು ಎಂದರೆ, ಸಾಕ್ಷಿಯು ಅವರಿಗೆ ಒಬ್ಬ ಹೆಣ್ಣು ಮಗಳು ಇದ್ದಳು ಎಂದು ನುಡಿಯುತ್ತಾರೆ. ಅವರು ಸಾಕು ಮಗಳೋ ಅಥವಾ ಸ್ವಂತ ಮಗಳೋ ನನಗೆ ಗೊತ್ತಿಲ್ಲ. ವಾದಿಯರ ವಂಶಸ್ಥರ ಬಗ್ಗೆ ನಿರ್ಧಾರ ಮಾಡುವ ಹಕ್ಕು ಅವರ ಕುಟುಂಬಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ. ಆಕೆ ಮೂಲ ಪುರುಷನ ಸಾಕು ಮಗಳಾಗಿರುವುದರಿಂದ, ಆಕೆಗೆ ವಾರಿಸಾ ಹಕ್ಕು ಇಲ್ಲದೇ ಇರುವ ಕಾರಣ, ಆಕೆಯನ್ನು ಈ ದಾವೆಯಲ್ಲಿ ಕಾಣಿಸಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು ಸಾಕು ಮಗಳಾದ್ದಲ್ಲಿ, ವಾರಿಸಾ ಬರುವುದಿಲ್ಲ ಎಂದು ಹೇಳಬಹುದು ಎಂದು ನುಡಿಯುತ್ತಾರೆ. ಆಕೆ ಸ್ವಂತ ಮಗಳಾದ್ದಲ್ಲಿ ಆಕೆಗೂ ಸಹಿತ, ದಾವಾಸ್ತಿಯಲ್ಲಿ ಪಾಲು ಇತ್ತು ಎಂದರೆ ಸರಿ. ಆಕೆ ತೀರಿಕೊಳ್ಳುವ ಮೊದಲು ತನಗೆ ದಾವಾಸ್ತಿಯಲ್ಲಿ ಹಕ್ಕು ಇದೆ ಎಂದು ಎಂದಿಗೂ ಕೇಳಿದ್ದು ಇರುವುದಿಲ್ಲ ಎಂದರೆ ಸರಿ. ನನಗೆ ವಾದಿಯರ ಕುಟುಂಬದ ವಂಶಾವಳಿಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇರುವ ಕಾರಣ, ನಾನು ಅದನ್ನು ಪ್ರಶ್ನಿಸಲು ಬರುವುದಿಲ್ಲ ಎಂದರೆ ಸರಿ. ವಾದಿಯರು ತಮ್ಮ, ಪ್ರತಿವಾದಿ ನಂಬರ್ 1(ಎ) ಇಂದ 1(ಹೆಚ್) ಮತ್ತು 2 ರಿಂದ 6 ನೇ ಪ್ರತಿವಾದಿಯರ ನಡುವೆ ಪಾಲು ವಾಂಟಣಿ ಆಗಿದ್ದು ಇರುವುದಿಲ್ಲ ಎಂದು, ವಾದಿಯರು ಹೇಳುತ್ತಾರೆ ಎಂದರೆ, ಸಾಕ್ಷಿಯ ಅವರ ನಡುವೆ ಪಾಲು ವಾಂಟಣಿ, ದಿನಾಂಕಃ 10.01.1991 ರಲ್ಲೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ

ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆಯೇ ಎಂದರೆ, ಸಾಕ್ಷಿ ನಾನು ಹಾಜರುಮಾಡಿಲ್ಲ ಎಂದು ನುಡಿಯುತ್ತಾರೆ.

ನಮ್ಮ ತಂದೆಯವರನ್ನು ಯರೇಬೈಲ್ ಗ್ರಾಮದವರು ಬಂದೂಕು ಸಾಹೇಬರು ಎಂದು ಕರಿಯುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರು ಮುಗ್ದರಿಗೆ , ಗವಳಿ ಜನಾಂಗದವರಿಗೆ ಮತ್ತು ಇತರೇ ಜನರಿಗೆ ಸಾಲವನ್ನು ಕೊಟ್ಟು , ಆಸ್ತಿಯನ್ನು ಬರೆಸಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ಈ ದಾವೆಯಲ್ಲಿಯೂ ಸಹ ದಾವಾಸ್ತಿಯ ಒಂದು ಭಾಗವನ್ನು ನಾವು ಖರೀದಿ ಮಾಡಿರುತ್ತೇವೆ ಎಂದು ಹೇಳಿದ್ದು, ಅದಕ್ಕೂ ಸಹ ನಮ್ಮ ತಂದೆಯವರು ಸಾಲ ಕೊಟ್ಟಿದ್ದರು ಎಂದರೆ ಸುಳ್ಳು.

ಜಾನು ಮಾಲು ದನಗರಗೌಳಿ ತನ್ನ ಮಗನ ಮದುವೆಗೆಂದು ನಮ್ಮ ತಂದೆಯ ಹತ್ತಿರ ಕೈಗಡ ಸಾಲವನ್ನು ಪಡೆದುಕೊಂಡಿದ್ದ ಎಂದರೆ, ಸಾಕ್ಷಿಯು ತನ್ನ ಮಗನ ಮದುವೆಗೋಸ್ಕರ ಮತ್ತು ಇಂದೂರು ಸೊಸೈಟಿಯಲ್ಲಿ ಸಾಲವನ್ನು ತುಂಬಲು, ಜಮೀನನ್ನು ಖರೀದಿಗೆ ಕೊಟ್ಟು ದುಡ್ಡನ್ನು ಪಡೆದುಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ಜಾನುರವರ ಹೆಸರಿಗಾಗಲೀ ಅಥವಾ ಅವರ ಕುಟುಂಬದವರ ಹೆಸರಿಗಾಗಲೀ ಯಾವುದೇ ಸಾಲ ಇಂದೂರು ಸೊಸೈಟಿಯಲ್ಲಿ ಇರಲಿಲ್ಲ ಎಂದರೆ, ಸಾಕ್ಷಿ ಸಾಲ ಇತ್ತು ಎಂದು ನುಡಿಯುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ನಾನು ದಾಖಲಾತಿಯನ್ನು ಹಾಜರುಪಡಿಸಿದ್ದು ಇರುವುದಿಲ್ಲ. ಜಾನು ರವರು ನಮ್ಮ ತಂದೆಯವರಿಂದ, 4,000/- ರೂಪಾಯಿ ಸಾಲವನ್ನು ಪಡೆದುಕೊಂಡು 2 ಎಕರೆ ಜಮೀನನ್ನು ಬಾಯಿಮಾತಿನ ಮೇಲೆ ಒತ್ತೆ ಹಾಕಿದ್ದರು ಎಂದರೆ ಸರಿಯಲ್ಲ.

ಸದರಿ ಜಾನು ರವರು ಹೀಗೆ ಒತ್ತೆ ಹಾಕಿದ ಬಗ್ಗೆ ಎಂದಿಗೂ ಲಿಖಿತವಾಗಿ ನಮಗೆ ಬರೆದುಕೊಟ್ಟಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು ಅವರು ಒತ್ತೆ ಹಾಕಿದ್ದೇ ಇರುವುದಿಲ್ಲ ಎಂದು ನುಡಿಯುತ್ತಾರೆ. ಜಮೀನನ್ನು ಖರೀದಿಗೆ ಕೊಟ್ಟು, ಸದರಿ ದಾಖಲಾತಿಯನ್ನು ನೋಂದಣಿ ಮಾಡಿಸಲು ಜಾನುರವರು ಎಂದಿಗೂ ಶಿರಸಿ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ತಾವು ಕೊಟ್ಟ 4,000/- ರೂಪಾಯಿ ಸಾಲಕ್ಕೆ ಅಸಲು ಬಡ್ಡಿ ಎಲ್ಲಾ ಸೇರಿ, ಅದನ್ನು 15,000/- ರೂಪಾಯಿ ಮಾಡಿ, ನಿಪಿ.7 ಖರೀದಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ನಮ್ಮ ತಂದೆಯವರು ಸದರಿ ಆಸ್ತಿಯನ್ನು ಪಡೆದುಕೊಳ್ಳುವ ಸಲುವಾಗಿ ಕಂದಾಯ ಅಧಿಕಾರಿಗಳನ್ನು ಶಾಮೀಲು ಮಾಡಿಕೊಂಡು, ನಿಪಿ.6 ರ ಪ್ರಕಾರ ಒಂದು ಖೊಟ್ಟಿ ವಾಂಟಣಿ ಎಂಟ್ರಿಯನ್ನು ಸೃಷ್ಟಿಮಾಡಿಕೊಂಡರು ಎಂದರೆ ಸುಳ್ಳು. ನಿಪಿ.6 ರ ಪ್ರಕಾರ ಜಾನು ಮಾಲು ಗೌಳಿ, ಬೈರು ಮಾಲು ಗೌಳಿ ಮತ್ತು ವಾಗು ಮಾಲು ಗೌಳಿ ಇವರ ನಡುವೆ ಇಂದಿಗೂ ವಾಂಟಣಿ ಆಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಸದರಿ 3 ಜನರು ತಮ್ಮ ತಮ್ಮೊಳಗೆ ವಾಂಟಣಿ ಮಾಡಿಕೊಂಡಿರುತ್ತೇವೆಂದು ಹೇಳಿ, ಅರ್ಜಿ ಕೊಟ್ಟಿದ್ದಾಗಲೀ ಅಥವಾ ವರದಿ ಮಾಡಿದ್ದಾಗಲೀ ಇರುವುದಿಲ್ಲ ಎಂದರೆ ಸುಳ್ಳು. ವಾದಿಯರು ತಮ್ಮ ದಾವಾಸ್ತಿಯ ಒಂದು ಭಾಗವನ್ನು ನೀವು ಹೊಡೆದುಕೊಳ್ಳುವ ಸಲುವಾಗಿ, ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದು ತೋರಿಸಲು ನಿಪಿ.6 ನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕಃ 30.01.1991 ರ ಖರೀದಿ ಪತ್ರವನ್ನು ಸೃಷ್ಟಿಸಿಕೊಳ್ಳುವ ಸಲುವಾಗಿಯೇ ನಮ್ಮ ತಂದೆಯವರು ದಿನಾಂಕಃ 10.01.1991 ರ ಮ್ಯೂಟೇಷನ್ ಎಂಟ್ರಿಯನ್ನು ಸೃಷ್ಟಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ನಿಪಿ.7 ನ್ನು ಜಾನು ಗೌಳಿ ಬರೆದುಕೊಟ್ಟಿದ್ದು ಇರುವುದಿಲ್ಲ ಮತ್ತು ಅದಕ್ಕೆ ಅವರು ಸಹಿ ಮಾಡಿದ್ದು ಇರುವುದಿಲ್ಲ ಎಂದರೆ ಸುಳ್ಳು.ಜಾನು ಗೌಳಿ ಮತ್ತು ಅವರ ಸಹೋದರರ ನಡುವೆ ವಾಂಟಣಿ ಆಗದೇ ಇದ್ದ ಕಾರಣ, ಅವರಿಗೆ ಖರೀದಿ ಪತ್ರ ಬರೆದುಕೊಡುವ ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ಜಾನು ಗೌಳಿ ರವರಿಗೆ ತನ್ನ ಪಾಲಿಗೆ ಬರುವ ಕ್ಷೇತ್ರಕೂಕ ಕೂಡ ತನ್ನ ಮಕ್ಕಳ ಸಮ್ಮತಿ ಇಲ್ಲದೇ ಖರೀದಿ ಪತ್ರ ಬರೆದುಕೊಡುವ ಅಧಿಕಾರ ಇರಲಿಲ್ಲ ಎಂದರೆ , ಸಾಕ್ಷಿಯು ಅವರ

ಮಕ್ಕಳ ಸಮ್ಮತಿಯನ್ನು ಪಡೆದುಕೊಂಡೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಸದರಿ ಜಾನು ಗೌಳಿ ರವರ ತಮ್ಮಂದಿರ ಮತ್ತು ಅವನ ಮಕ್ಕಳ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವು ಎಂದು ತೋರಿಸಲು ನಾವು ದಾಖಲಾತಿಗಳನ್ನು ಹಾಜರುಪಡಿಸಿದ್ದೇವೆಯೇ ಎಂದರೆ ಇಲ್ಲ.

2005-06 ನೇ ಸಾಲಿನವರೆಗೂ ದಾವಾಸ್ತಿ ಸರ್ವೇ ನಂಬರ್ 72 ಅಖಂಡ 13 ಎಕರೆ 20 ಗುಂಟೆ (1 ಎಕರೆ ಖರಾಬ್ ) ಆಗಿಯೇ ಇತ್ತು ಎಂದರೆ ಸುಳ್ಳು ಸಾಕ್ಷಿ ಮುಂದುವರೆದು, 1991 ರಲ್ಲಿ ಖರೀದಿಯಾದಾಗಲೇ ಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಯು ಜಾನುರವರಿಗಾಗಲೀ ಬೈರುರವರಿಗಾಗಲೀ ಮತ್ತು ವಾಗುರವರಿಗಾಗಲೀ ತಿಳಿಸದೇ ಅಖಂಡ ಕ್ಷೇತ್ರವನ್ನು ಒಡೆದಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ ಭಾಗ ಆದದ್ದು ನಿಪಿ.9 ರಿಂದ 12 ರಲ್ಲಿ ನಮೂದಾಗಿದೆ ಎಂದರೆ ಸುಳ್ಳು. ಹೀಗೆ ದಾವಾಸ್ತಿಯ ಕ್ಷೇತ್ರವನ್ನು ಒಡೆಯುವಾಗ 7 ನೇ ಪ್ರತಿವಾದಿ ಮಾತ್ರ ಸ್ಥಳದಲ್ಲಿ ಹಾಜರಾಗಿದ್ದು ಇರುತ್ತದೆ , ಉಳಿದವರಿಗೆ ಯಾವುದೇ ರೀತಿಯ ನೋಟಿಸ್ಸನ್ನೂ ಸಹ ಜಾರಿ ಮಾಡಿದ್ದು ಇರುವುದಿಲ್ಲ ಎಂದರೆ ಸುಳ್ಳು. ಹೀಗೆ ಭಾಗವಾದ ಸಂಗತಿಯೂ ನಿಪಿ. 12 ರಲ್ಲಿ ನಮೂದಾಗಿರುತ್ತದೆ ಎಂದರೆ ಸುಳ್ಳು. 2005-06 ರಲ್ಲಿ ಭಾಗವಾಗುವ ಪೂರ್ವದಲ್ಲಿ ಯಾರ ಯಾರಿಗೆ ದಾವಾಸ್ತಿಯಲ್ಲಿ ಯಾವ ಯಾವ ಕ್ಷೇತ್ರ ಬರುತ್ತದೆಂದು ನಿಗದಿಯಾಗಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು 1991 ರಲ್ಲಿ ವಾಂಟಣಿ ಮಾಡಿಕೊಂಡು , ನಕ್ಷೆ ತಯಾರಿಸಿಕೊಂಡೆ ಖರೀದಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಗಾಗಿ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**